# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಪೊಂಪನಗೌಡ ತಂದೆ ಲಿಂಗನಗೌಡ,<br>ಕಪ್ಪಗಲ್ಲು ಗ್ರಾಮ ಬಳ್ಳಾರಿ ತಾ॥ | ಶ್ರೀ ಕರಿಬಸವನಗೌಡ ತಂದೆ ಕಲ್ಲನಗೌಡ<br>ಶ್ರೀ ನಾಗನಗೌಡ ತಂದೆ ಕಲ್ಲನಗೌಡ |

**ವಿಷಯ:**-ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕಪ್ಪಗಲ್ಲು ಗ್ರಾಮದ ಸರ್ವೆ ನಂ:343 ವಿಸ್ತೀರ್ಣ:4.80 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

********

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕಪ್ಪಗಲ್ಲು ಗ್ರಾಮದ ಸರ್ವೆ ನಂ:343 ವಿಸ್ತೀರ್ಣ:4.80 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ಗೌರಣ್ಣ ಇವರ ಹೆಸರಿನಲ್ಲಿ ಸದ್ರಿ ಜಮೀನು ಇರುವುದಾಗಿ ಪಹಣಿ ಕಾಲಂ 9ರಲ್ಲಿ ನಮೂದಾಗಿರುತ್ತಾದೆ. ಮೂಲ ಪಟ್ಟಾದಾರರಾದ ಸೇಟಲ್ ಮೆಂಟ್ ರಿಜಿಸ್ಟರ್‌ನಂತೆ ಬಾವಿಕಟ್ಟಿ ಬಸವನಗೌಡ ಇವರ ಹೆಸರಿನಲ್ಲಿ ಇರುತ್ತಾದೆ. ಮೂಲ ಪಟ್ಟಾದಾರರ ವಾರಸುದಾರರು ಮಾನ್ಯ ಸಹಾಯಕ ಆಯುಕ್ತರು, ಬಳ್ಳಾರಿ ಇವರ ಅಪೀಲ್ ಸಂಖ್ಯೆ81/2011-12 ದಿನಾಂಕ:04-08-2015ರ ಆದೇಶದಲ್ಲಿ ಸದ್ರಿ ಜಮೀನಿನ ಬಗ್ಗೆ ವಿಚಾರಣೆ ನಡೆಸಿ ಆದೇಶಿ ಮಾಡಲು ಸೂಚಿಸಿರುತ್ತಾರೆ. ತಕಾರರುದಾರರಾದ ಶ್ರೀ ಕರಿಬಸವನಗೌಡ ತಂದೆ ಕಲ್ಲನಗೌಡ ಶ್ರೀ ನಾಗನಗೌಡ ತಂದೆ ಕಲ್ಲನಗೌಡ ಇವರು ಸದ್ರಿ ಜಮೀನು ನಮ್ಮ ತಾತನ ಹೆಸರಿನಲ್ಲಿ ಇರುವುದರಿಂದ ಮಾನ್ಯ ಸಿವಿಲ್ ನ್ಯಾಯಲಯದಲ್ಲಿ ದಾವೆ ಇರುವುದರಿಂದ ಹಕ್ಕುದಲಾವಣೆ ಮಾಡದಂತೆ ತಕಾರರುನ್ನು ಸಲ್ಲಿಸಿರುತ್ತಾರೆ. ಮಾನ್ಯ ಸಿವಿಲ್ ನ್ಯಾಯಲಯದ ಓ.ಎಸ್ ಸಂಖ್ಯೆ:409/2010ರ ದಿನಾಂಕ:09-04-2015ರ ಪ್ರಕಾರ ಶ್ರೀ ಪೊಂಪನಗೌಡ ತಂದೆ ಲಿಂಗನಗೌಡ, ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಮಾಡಲಾಗಿರುತ್ತದೆ.

ಮಾನ್ಯ ಸಿವಿಲ್ ನ್ಯಾಯಲಯದ ಓ.ಎಸ್ ಸಂಖ್ಯೆ:409/2010ರ ದಿನಾಂಕ:09-04-2015ರ ಪ್ರಕಾರ ಸದ್ರಿ ಪ್ರಕರಣದ ಬಗ್ಗೆ ದಿನಾಂಕ:01-08-2016ರಂದು ವಿಚಾರಣೆ ನಡೆಸಲಾಗಿ ಅರ್ಜಿದಾರರು ಪ್ರಕರಣಕ್ಕೆ ಹಾಜರಾರುತ್ತಾರೆ. ತಕರಾರರು ಗೈರು ಹಾಜರಾಗಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ.

**-::ಆದೇಶ::-**

ಸಂ/ಕಂ/ವಿವಾದ/ 494 /2016-17 ದಿನಾಂಕ: 01 / 8/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕಪ್ಪಗಲ್ಲು ಗ್ರಾಮದ ಸರ್ವೆ ನಂ:343 ವಿಸ್ತೀರ್ಣ:4.80 ಎಕರೆ ಜಮೀನು ಮಾನ್ಯ ಸಿವಿಲ್ ನ್ಯಾಯಲಯದ ಓ.ಎಸ್ ಸಂಖ್ಯೆ:409/2010ರ ದಿನಾಂಕ:09-04-2015ರ ಪ್ರಕಾರ ವಾದಿ ಮತ್ತು ಪ್ರತಿವಾದಿಗಳಿಗೆ ನಮೂನೆ-21ರ ನೋಟಿಸು ತೆಗೆದು ಪ್ರಚಾರಪಡಿಸಿ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:__________ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ.

ತಹಶೀಲ್ದಾರರು, ಬಳ್ಳಾರಿ
Tasildar, Bellary.

**ಪ್ರತಿಯನ್ನು:**

1.ವಾದಿಗಳು

2.ಶಿರಸ್ತೇದಾರರು ಭೂಮಿ

3.ಆದೇಶದ ಕಡತಕ್ಕೆ